
# 13ರಂದು ಹೊರಟ್ಟಿ ಅಭಿನಂದನಾ ಸಮಾರಂಭ

**ವಿಕ ಸುದ್ದಿಲೋಕ** ಹುಬ್ಬಳ್ಳಿ
ಸತತವಾಗಿ 8 ಬಾರಿ ಪಶ್ಚಿಮ ಶಿಕ್ಷಕ ಮತಕ್ಷೇತ್ರದಿಂದ ರಾಜ್ಯ ವಿಧಾನ ಪರಿಷತ್‌ಗೆ ಆಯ್ಕೆಯಾಗಿ ದಾಖಲೆ ನಿರ್ಮಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲು ಬಸವರಾಜ ಹೊರಟ್ಟಿ ಅಭಿನಂದನಾ ಸಮಿತಿ ನಿರ್ಧರಿಸಿದೆ.



ಸಮಾರಂಭ ಕುರಿತು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಬಸವರಾಜ ಹೊರಟ್ಟಿ ಅಭಿನಂದನಾ ಸಮಿತಿ ಅಧ್ಯಕ್ಷ ಶಂಕರಣ್ಣ ಮುನವಳ್ಳಿ, ''ಈ ಭಾಗದಲ್ಲಿ ಹೊರಟ್ಟಿ ಅವರು ರಾಜಕೀಯ ಕ್ಷೇತ್ರದಲ್ಲಿ ಗಿನ್ನೆಸ್ ದಾಖಲೆ ಮಾಡಿದ್ದಾರೆ. 8 ಬಾರಿ ನಿರಂತರವಾಗಿ ಆಯ್ಕೆಯಾಗುವುದು ಸಾಮಾನ್ಯವಲ್ಲ, ಇದು ಸಾಧನೆ. ಈ ಹಿನ್ನೆಲೆಯಲ್ಲಿ ಅವರಿಗೆ ಅಭಿನಂದನೆ ಸಲ್ಲಿಸಲು ಡಿ. 13ರಂದು ಸಂಜೆ 4ಕ್ಕೆ ನೆಹರು ಮೈದಾನದಲ್ಲಿ ಸಮಾರಂಭ ಹಮ್ಮಿಕೊಳ್ಳಲಾಗಿದೆ'' ಎಂದರು.

**20 ಸಾವಿರ ಜನ ಸೇರುವ ನಿರೀಕ್ಷೆ:** ''ಬಿಜೆಪಿ-ಕಾಂಗ್ರೆಸ್-ಜೆಡಿಎಸ್ ಸೇರಿ ಎಲ್ಲಾ ಪಕ್ಷಗಳಿಂದ ಅಭಿನಂದನಾ ಸಮಾರಂಭ ನಡೆಸಲಾಗುತ್ತಿದೆ. ಧಾರವಾಡ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ, ಬೆಳಗಾವಿ ಸೇರಿದಂತೆ ರಾಜ್ಯದ ನಾನಾ ಮೂಲೆಗಳಿಂದ ಶಿಕ್ಷಕರು, ಶಿಕ್ಷಕ ಸಂಘಟನೆಗಳು, ಶಿಕ್ಷಣ ಸಂಸ್ಥೆಗಳು, ನೌಕರರ ಸಂಘಟನೆಗಳಿಂದ ಸುಮಾರು 20 ಸಾವಿರ ಕ್ಕೂ ಹೆಚ್ಚು ಅಭಿಮಾನಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ,'' ಎಂದು ತಿಳಿಸಿದರು.

ಸಮಾರಂಭವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿಯೂ ಆದ ರಾಜ್ಯಸಭೆ ಸದಸ್ಯ ಡಾ. ಡಿ. ವೀರೇಂದ್ರ ಹೆಗ್ಗಡೆ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ಎಚ್.ಡಿ. ಕುಮಾರಸ್ವಾಮಿ, ಡಿಸಿಎಂ ಡಿ.ಕೆ. ಶಿವಕುಮಾರ, ಸ್ಪೀಕರ್ ಯು.ಟಿ. ಖಾದರ ಅತಿಥಿಗಳಾಗಿ ಆಗಮಿಸುವರು. ಉಸ್ತುವಾರಿ ಸಚಿವ ಸಂತೋಷ ಲಾಡ್ ಅಧ್ಯಕ್ಷತೆ ವಹಿಸುವರು.

ಪ್ರಜಾವಾಣಿ




ತಾಲ್ಲೂಕಿನ ರಾಮನಗರ ಪ್ರೌಢಶಾಲೆಯಲ್ಲಿ ಧಾರವಾಡದ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ವತಿಯಿಂದ ಗುರುವಾರ ಎಸ್‌ಎಸ್‌ಎಲ್‌ಸಿ ರಾಜ್ಯ ಪಠ್ಯಕ್ರಮ ಆಧಾರಿತ ಮೌಲ್ಯಾಂಕನ ಸಾಮಾಗ್ರಿ ಪುಸ್ತಕ ಬಿಡುಗಡೆಗೊಳಿಸಲಾಯಿತು

# ದೇಶದ ಬೆಳವಣಿಗೆಗೆ ಗುರು ಶಿಷ್ಯರ ಪಾತ್ರ ಮುಖ್ಯ'

ಪ್ರಜಾವಾಣಿ ವಾರ್ತೆ

**ಜೊಯಿಡಾ:** 'ಶಿಕ್ಷಣ ನೀಡುವ ಗುರುಗಳು ಶ್ರೇಷ್ಠರಾಗಿದ್ದು, ದೇಶದ ಬೆಳವಣಿಗೆ ಗುರು ಶಿಷ್ಯರ ಪಾತ್ರ ಮುಖ್ಯವಾಗಿದೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ತಾಲ್ಲೂಕಿನ ರಾಮನಗರ ಪ್ರೌಢಶಾಲೆಯಲ್ಲಿ ಧಾರವಾಡದ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ವತಿಯಿಂದ ಗುರುವಾರ ನಡೆದ ಎಸ್‌ಎಸ್‌ಎಲ್‌ಸಿ ರಾಜ್ಯ ಪಠ್ಯಕ್ರಮ ಆಧಾರಿತ ಮೌಲ್ಯಾಂಕನ ಸಾಮಾಗ್ರಿ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿಧ್ಯಾರ್ಥಿಗಳು ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು' ಎಂದರು.

ನಿವೃತ್ತಿ ಡಿಸಿಎಫ್ ಶಿವಾನಂದ ತೋಡ್ಕರ್ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಿದರು. ರಾಮನಗರ ಗ್ರಾಮ ಪಂಚಾಯಿತಿ ಅಧ್ಯಕ್ಷ ಶಿವಾಜಿ ಗೋಸಾವಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಭಾರತಿ ಎನ್, ನಿವೃತ್ತಿ ಎಸಿಎಫ್ ಸಿ.ಕೆ. ಗಾರವಾಡ, ಸರ್ಕಾರಿ ನೌಕರರ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ್ ಸಾಳುಂಕೆ, ಕ್ಷೇತ್ರ ಶಿಕ್ಷಣಾಧಿಕಾರಿ ಬಷೀರ್ ಅಹ್ಮದ್ ಶೇಖ್ ಇದ್ದರು.

[redacted]

# 'ವಿದ್ಯಾರ್ಥಿ ಜೀವನ ಅಮೂಲ್ಯ'

■ **ಉದಯವಾಣಿ ಸಮಾಚಾರ**

**ಜೋಯಿಡಾ:** ತಾಲೂಕಿನ ರಾಮನಗರ ಸರಕಾರಿ ಪ್ರೌಢಶಾಲೆಯಲ್ಲಿ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ಧಾರವಾಡ ನಡೆಸಿದ ಎಸ್ ಎಸ್ ಎಲ್ ಸಿ ರಾಜ್ಯ ಪಠ್ಯಕ್ರಮ ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ಪುಸ್ತಕಗಳ ಬಿಡುಗಡೆ ಹಾಗೂ ವಿತರಣಾ ಕಾರ್ಯಕ್ರಮವನ್ನು ಸಭಾಪತಿ, ಬಸವರಾಜ ಹೊರಟ್ಟಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನ ಅಮೂಲ್ಯವಾದದ್ದು. ಶಿಕ್ಷಣ ನೀಡುವ ಗುರು ಇನ್ನೂ ಶ್ರೇಷ್ಟರು. ದೇಶದ ಬೆಳವಣಿಗೆಗೆ ಗುರು ಶಿಷ್ಯ ಪಾತ್ರ ಅತಿ ಮುಖ್ಯವಾಗಿದೆ. ಇಂಥ ಕಾರ್ಯಕ್ರಮಗಳನ್ನು ಸಂಘಟಿಸುವ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ಉತ್ತಮ ಕೆಲಸ ಮಾಡುತ್ತಿದೆ. ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಕೈಜೋಡಿಸೋಣ. ಇಂಥ ಕಾರ್ಯಕ್ರಮಗಳನ್ನು ಸದಾ ಬೆಂಬಲಿಸುತ್ತೇನೆ. ಶಿವಾನಂದ ತೋಡಕರ ಡಿ ಎಫ್ ಓ (ಆರ್ಫ) ಮುದ್ರಣ ಮಾಡಿ ಪುಸ್ತಕ ಹಂಚಿದ್ದಾರೆ ಇದರ ಲಾಭ ಪಡೆಯಬೇಕೆಂದರು.

ಈ ಸಂದರ್ಭದಲ್ಲಿ ರಾಮನಗರ ಗ್ರಾಮ ಪಂಚಾಯತ್ ಅಧ್ಯಕ್ಷ ಶಿವಾಜಿ ಗೋಸಾವಿ, ಇಒ ಭಾರತಿ ಎನ್., ಶಿವಾನಂದ ತೋಡಕರ, ನಿವೃತ್ತ ಎಸಿಎಫ್ ಸಿ.ಕೆ.ಗಾರವಾಡ, ನಿವೃತ್ತ. ಅರಣ್ಯ ಅಧಿಕಾರಿಗಳ ಸಂಘ ಧಾರವಾಡ, ಎಸ್ ಆರ್ ಸಾಳುಂಕೆ ಮತ್ತು ಇತರರು ಇದ್ದರು.



ಜೋಯಿಡಾ: ಎಸ್ ಎಸ್ ಎಲ್ ಸಿ ರಾಜ್ಯ ಪಠ್ಯಕ್ರಮ ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ಪುಸ್ತಕಗಳನ್ನು ಗಣ್ಯರ ಬಿಡುಗಡೆಗೊಳಿಸಿದರು.

# ದೇಶದ ಬೆಳವಣಿಗೆಗೆ ಗುರು ಶಿಷ್ಯರ ಪಾತ್ರ ಮುಖ್ಯ: ಸಭಾಪತಿ ಹೊರಟ್ಟಿ

**ಜೊಯಿಡಾ:** ವಿದ್ಯಾರ್ಥಿಜೀವನ ಅಮೂಲ್ಯವಾದದ್ದು, ಶಿಕ್ಷಣನೀಡುವಗುರುಇನ್ನೂಶ್ರೇಷ್ಠರು. ದೇಶದ ಬೆಳವಣಿಗೆಗೆ ಗುರು ಶಿಷ್ಯ ಪಾತ್ರ ಅತಿ ಮುಖ್ಯವಾಗಿದೆ. ಇಂತಹ ಕಾರ್ಯಕ್ರಮಗಳನ್ನು ಸಂಘಟಿಸುವ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ಉತ್ತಮ ಕೆಲಸ ಮಾಡುತ್ತಿದೆ. ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.


ತಾಲೂಕಿನ ರಾಮನಗರ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ಧಾರವಾಡ ಇವರು ನಡೆಸಿದ ಎಸ್‌ಎಸ್‌ಎಲ್‌ಸಿ ರಾಜ್ಯ ಪಠ್ಯಕ್ರಮ ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ಪುಸ್ತಕಗಳ ಬಿಡುಗಡೆ ಹಾಗೂ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂತಹ ಕಾರ್ಯಕ್ರಮಗಳನ್ನು ಸದಾ ಬೆಂಬಲಿಸುತ್ತೇನೆ. ಶಿವಾನಂದ ತೋಡಕರ ಪ್ರಿಂಟ್ ಮಾಡಿ ಪುಸ್ತಕ ಹಂಚಿದ್ದಾರೆ ಇದರ ಲಾಭ ಪಡೆಯಬೇಕೆಂದರು.

ಈ ಸಂದರ್ಭದಲ್ಲಿ ರಾಮನಗರ ಗ್ರಾಮ ಪಂಚಾಯತಿ ಅಧ್ಯಕ್ಷ ಶಿವಾಜಿ ಗೋಸಾವಿ, ಇಒ ಭಾರತಿ ಎನ್., ಶಿವಾನಂದ ತೋಡಕರ ನಿವೃತ್ತ ಎಸಿಎಫ್, ಸಿ. ಕೆ ಗಾರವಾಡ, ನಿವೃತ್ತ ಅರಣ್ಯ ಅಧಿಕಾರಿಗಳ ಸಂಘ ಧಾರವಾಡ, ಎಸ್.ಆರ್. ಸಾಳುಂಕೆ ಅಧ್ಯಕ್ಷ ನೌಕರರ ಸಂಘ ಜೊಯಿಡಾ, ಜಿ.ಆರ್. ಭಟ್, ಮಾ.ಶಾ.ನೌ.ಸಂ, ಬಸಿರ ಅಹಮ್ಮದ ಬಿಇಒ, ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಇದ್ದರು.



ಜೊಯಿಡಾ: ತಾಲೂಕಿನ ರಾಮನಗರ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ಧಾರವಾಡ ಇವರು ನಡೆಸಿದ ಎಸ್‌ಎಸ್‌ಎಲ್‌ಸಿ ರಾಜ್ಯ ಪಠ್ಯಕ್ರಮ ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ, ಪುಸ್ತಕಗಳ ಬಿಡುಗಡೆ ಹಾಗೂ ವಿತರಣಾ ಕಾರ್ಯಕ್ರಮವನ್ನು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಿದರು.

# ಎಸ್.ಎಸ್.ಎಲ್.ಸಿ ಮೌಲ್ಯಾಂಕನ ಸಾಮಗ್ರಿ ಪುಸ್ತಕ ಬಿಡುಗಡೆ



**e - ಉತ್ತರಕನ್ನಡ ವರದಿ**

**ಜೊಯಿಡಾ;** ತಾಲೂಕಿನ ರಾಮನಗರ ಸರಕಾರಿ ಪ್ರೌಢ ಶಾಲೆಯಲ್ಲಿ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ಧಾರವಾಡ ಇವರು ನಡೆಸಿದ ಎಸ್ ಎಸ್ ಎಲ್ ಸಿ ರಾಜ್ಯ ಪತ್ಯಕ್ರಮ ಪಾತ ಆಧಾರಿತ ಮೌಲ್ಯಾಂಕನ ಸಾಮಗ್ರಿ ಪುಸ್ತಕಗಳ ಬಿಡುಗಡೆ ಹಾಗೂ ವಿತರಣಾ ಕಾರ್ಯಕ್ರಮವನ್ನೂ ಬಸವರಾಜ ಹೊರಟ್ಟಿ ಸಭಾಪತಿಗಳು ಕರ್ನಾಟಕ ವಿಧಾನ ಪರಿಷತ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ವಿಧ್ಯಾರ್ಥಿ ಜೀವನ ಅಮೂಲ್ಯವಾದದ್ದು, ಶಿಕ್ಷಣ ನೀಡುವ ಗುರು ಇನ್ನೂ ಶ್ರೇಷ್ಟರು, ದೇಶದ ಬೆಳವಣಿಗೆಗೆ ಗುರು ಶಿಷ್ಯ ಪಾತ್ರ ಅತಿ ಮುಖ್ಯವಾಗಿದೆ. ಇಂತಹ ಕಾರ್ಯಕ್ರಮಗಳನ್ನು ಸಂಘಟಿಸುವ ನಿವೃತ್ತ ಅರಣ್ಯಾಧಿಕಾರಿಗಳ ಸಂಘ ಉತ್ತಮ ಕೆಲಸ ಮಾಡುತ್ತಿದೆ. ವಿಧ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು. ಇಂತಹ ಕಾರ್ಯಕ್ರಮಗಳನ್ನು ಸದಾ ಬೆಂಬಲಿಸುತ್ತೇನೆ. ಶಿವಾನಂದ ತೋಡಕರ ಪ್ರಿಂಟ್ ಮಾಡಿ ಪುಸ್ತಕ ಹಂಚಿದ್ದಾರೆ ಇದರ ಲಾಭ ಪಡೆಯಬೇಕೆಂದರು. ಈ ಸಂದರ್ಭದಲ್ಲಿ ರಾಮನಗರ ಗ್ರಾಮ ಪಂಚಾಯತ್ ಅಧ್ಯಕ್ಷ ಶಿವಾಜಿ ಗೋಸಾವಿ, ಇ ಓ ಭಾರತಿ ಎನ್, ಶಿವಾನಂದ ತೋಡಕರ ನಿವೃತ್ತ ಎಸಿಎಫ್, ಸಿ. ಕೆ ಗಾರವಾಡ, ನಿವೃತ್ತ.ಅರಣ್ಯ ಅಧಿಕಾರಿಗಳ ಸಂಘ ಧಾರವಾಡ, ಎಸ್ ಆರ್ ಸಾಳುಂಕೆ ಅಧ್ಯಕ್ಷ ನೌಕರರ ಸಂಘ ಜೊಯಿಡಾ, ಜಿ ಆರ್ ಭಟ್, ಮಾ.ಶಾ.ನೌ.ಸಂ, ಬಸಿರ ಅಹಮ್ಮದ ಬಿ ಇ ಓ , ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಇದ್ದರು.